ಮಾಡಿ ತಕ್ಷಣ ಅವರನ್ನು ಅಮಾನತ್ತಿನಲ್ಲಿಡಬೇಕೆಂದು ಹೇಳುತ್ತೇನೆ. ನಾನು ಯಾರ ಬಗ್ಗೆಯೂ ವಕಾಲತ್ತು ಮಾಡಲಿಕ್ಕೆ ಬಂದಿಲ್ಲ. ಆದರೆ ತಮ್ಮ ಇಲಾಖೆಯ ಅಡಳಿತ ವೈಖರಿಯನ್ನು ನೋಡಿದರೆ ಬಹುಶಃ ಅವರು ಅಮಾಯಕರ ಮೇಲೆ ಹಲ್ಲೆ ಮಾಡತಕ್ಕದ್ದು ಆಗುತ್ತಿದೆ. ಇದರ ಬಗ್ಗೆ ತಕ್ಷಣ ಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಪೂರ್ಣ ಮಾಹಿತಿಯನ್ನು ತರಿಸಿ ಆಮೇಲೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಆಗಬಹುದು, ಶ್ರೀ ಶ್ರೀರಾಮ ರೆಡ್ಡಿಯವರು ಮಾತನಾಡಬಹುದು.

ಉ) ಸರ್ಕಾರದ ಅನುಮತಿ ಇಲ್ಲದೆ ಹಣ ಬಿಡುಗಡೆ ಮಾಡಿರುವುದರಿಂದ ಇಬ್ಬರು ಐ.ಎ.ಎಸ್. ಅಧಿಕಾರಿಗಳ ವಿರುದ್ಧ ಕ್ರಮ

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಇಬ್ಬರು ಐಎಎಸ್ ಇಬ್ಬರು ಎಕ್ಸೈಸ್ ಡೆಪ್ಯುಟಿ ಕಮೀಷನರ್ ಮತ್ತು ಡೆಪ್ಯುಟಿ ಸೆಕ್ರೆಟರಿಯವರ ಮೇಲೆ ತಕ್ಷಣ ಕ್ರಿಮಿನಲ್ ಕೇಸನ್ನು ದಾಖಲು ಮಾಡಿ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಅವರನ್ನು ಬಂಧಿಸಬೇಕೆಂದು ನನ್ನ ವಾದ. ಏಕೆಂದರೆ 1992ರ ಮೇ 12ರಂದು ರೆಟ್ರಿಫೈಡ್ ಸ್ಪಿರಿಟ್ನ ರೇಟನ್ನು ಹೆಚ್ಚು ಮಾಡಿ ಅದಕ್ಕೆ ಬರಬೇಕಾದ ವ್ಯತ್ಯಾಸದ ಹಣವನ್ನು ಸರ್ಕಾರದ ಗಮನಕ್ಕೂ ತಾರದೆ, ಕ್ಯಾಬಿನೆಟ್ ಅಪ್ರೂವಲ್ ಇಲ್ಲದೆ ಎಲ್ಲಾ ಕಾಯಿದೆಗಳನ್ನು ಉಲ್ಲಂಘನೆ ಮಾಡಿ 8 ಕೋಟಿ ರೂಪಾಯಿ ಹಣವನ್ನು 11 ಡಿಸ್ಟಿಲರೀಸ್ ಕಂಪನಿಗಳಿಗೆ ಕೊಟ್ಟಿದ್ದಾರೆ. ಈ ರೀತಿ ಕೊಟ್ಟಿರತಕ್ಕದ್ದು ಸರಿಯಿಲ್ಲವೆಂದು ಹೇಳಿ ಜುಲೈ 12ನೇ ತಾರೀಖು 1993ನೇ ಇಸವಿಯಲ್ಲಿ ಮಾನ್ಯ ಮೊಯಿಲಿಯವರ ಸರ್ಕಾರ ಆ ಹಣವನ್ನು ರಿಕವರಿ ಮಾಡಬೇಕೆಂದೂ ಹಾಗೂ ಈ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದೂ ಹೇಳಿ ಅವರನ್ನು ಅಮಾನತ್ತುಗೊಳಿಸಿದರು. ಆದರೆ ಇವತ್ತಿಗೂ ಆ ಹಣವನ್ನು ರಿಕವರಿ ಮಾಡಲಿಲ್ಲ, ಅವರುಗಳ ಮೇಲೆ ಕ್ರಮವನ್ನು ತೆಗೆದುಕೊಂಡಿಲ್ಲ. ಈಗ ಹಿರಿಯ ಐಎಎಸ್ ಅಧಿಕಾರಿ ಅಲೆಗ್ಸಾಂಡರ್ ಎಂಬುವರು ಈ ತಿಂಗಳ ಕೊನೆಗೆ ರಿಟೈರ್ಡ್ ಆಗುತ್ತಿದ್ದಾರೆ. ರಿಟೈರ್ಡ್ ಆದಮೇಲೆ ಅವರ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅಲೆಗ್ಸಾಂಡರ್ ಮತ್ತು ಬುಳ್ಳಾಸುಬ್ಬರಾವ್, ಹೆಚ್.ಎಫ್. ಸೇಟ್, ಲಕ್ಷ್ಮೀನಾರಾಯಣ ಈ ನಾಲ್ಕು ಜನ ಅಧಿಕಾರಿಗಳು ಅದರಲ್ಲಿ ಷಾಮೀಲಾಗಿದ್ದಾರೆ. 8 ಕೋಟಿ ರೂಪಾಯಿ ಸರ್ಕಾರಿ ಹಣವನ್ನು ಯಾವುದೇ ಕಾನೂನು ಇಲ್ಲದೆ, ಸರ್ಕಾರದ ಅನುಮತಿ ಇಲ್ಲದೆ ಬಿಡುಗಡೆ ಮಾಡಿದ್ದಾರೆ. ಅವರನ್ನು ಸಸ್ಪೆಂಡ್ ಮಾಡಲಾಗಿತ್ತು.

ಅಧ್ಯಕ್ಷರು : ಮಾನ್ಯ ಸದಸ್ಯರು ವಿಕ್ಟೋರಿಯಾ ಆಸ್ಪತ್ರೆ ವಿಚಾರ ಪ್ರಸ್ತಾಪ ಮಾಡುತ್ತೇನೆ ಎಂದು ನನಗೆ ಹೇಳಿ ಈಗ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ಇದು ನನಗೆ ಅರ್ಥವೇ ಆಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದೊಂದು ವಿಷಯ. ಆದ್ದರಿಂದ ಅವರುಗಳ ಮೇಲೆ ತಕ್ಷಣ ಕ್ರಿಮಿನಲ್ ಕೇಸನ್ನು ದಾಖಲು ಮಾಡಬೇಕು. ಅವರು ಈ ತಿಂಗಳ ಕೊನೆಯಲ್ಲಿ ರಿಟೈರ್ಡ್ ಆಗುತ್ತಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಮಾನ್ಯ ಅಧ್ಯಕ್ಷರೆ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಖಾಸಗಿ ಔಷಧಾಲಯಗಳಿಂದ ಖೋಟಾ ರಶೀತಿಗಳನ್ನು ಪಡೆದು ಲಕ್ಷಾಂತರ ರೂಪಾಯಿ ಔಷಧಿ ಖರೀದಿಯನ್ನು ಮಾಡಿದ್ದಾರೆ. ಅಂದರೆ ಖಾಸಗಿ ಔಷಧಿ ವ್ಯಾಪಾರಿಗಳಿಂದ ಖೋಟಾ ರಶೀತಿಗಳನ್ನು

ಪಡೆದುಕೊಂಡು ಔಷಧಿಯನ್ನು ಸರಬರಾಜು ಮಾಡದೆ ಬಿಲ್ಲಗಳನ್ನು ಡ್ರಾ ಮಾಡಿರತಕ್ಕ ಅವ್ಯವಹಾರ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದ್ದರೂ ಕೂಡ ಅದರ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಮಾನ್ಯ ಆರೋಗ್ಯ ಸಚಿವರು ನಾನು ಹೇಳುವುದನ್ನು ಗಮನಿಸಬೇಕು. ಅಲ್ಲಿ ಕಾರ್ಯದರ್ಶಿಯಾಗಿರತಕ್ಕ ಎಸ್. ರಾಮಯ್ಯ, ಅಂದಾನಯ್ಯ ಅವರು ಈ ದಂಧೆಯಲ್ಲಿ ಭಾಗವಹಿಸಿದ್ದಾರೆ. ಅದರಲ್ಲಿ ಕೆಲವು ಫಾರ್ಮಸಿಸ್ಟ್‌ಗಳು ಕೂಡ ಷಾಮೀಲಾಗಿ ಔಷಧಿ ಸರಬರಾಜು ಮಾಡದೆ ಖೋಟಾ ಬಿಲ್ಲುಗಳನ್ನು ಖಾಸಗಿಯವರಿಂದ ತೆಗೆದುಕೊಂಡು ಬಂದು ಬಿಲ್ಲುಗಳನ್ನು ತೋರಿಸಿ ಲಕ್ಷಾಂತರ ರೂಪಾಯಿಗಳ ಹಣವನ್ನು ಪಡೆದುಕೊಂಡಿದ್ದಾರೆ. ಆದ್ದರಿಂದ ಅವರುಗಳನ್ನು ಅಮಾನತ್ತುಗೊಳಿಸಬೇಕೆಂದು ಮಾನ್ಯ ವಿ. ಸೋಮಣ್ಣನವರು ಕೂಡ ಹಿಂದೆ, ಅವರು ಶಾಸಕರಾಗಿದ್ದಾಗ ಸಂಬಂಧಪಟ್ಟ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಇಷ್ಟಾದರೂ ಕೂಡ ಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಅವರುಗಳ ಮೇಲೆ ಕ್ರಿಮಿನಲ್ಕೇಸನ್ನು ದಾಖಲು ಮಾಡಿ ಅವರುಗಳನ್ನು ಅಮಾನತ್ತುಗೊಳಿಸಿ ಅವರನ್ನು ಬಂಧಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಸಿ. ಮಹಾದೇವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ವಿಚಾರವನ್ನು ಈಗ ತಾನೇ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅವರಲ್ಲಿರತಕ್ಕ ಮಾಹಿತಿಗಳನ್ನು ಒದಗಿಸಿಕೊಟ್ಟರೆ ವಿಕ್ಟೋರಿಯಾ ಆಸ್ಪತ್ರೆ ವೈದ್ಯಕೀಯ ಮಂತ್ರಿಗಳಿಗೆ ಬರುತ್ತದೆ. ಅವರ ಗಮನಕ್ಕೂ ಈ ವಿಚಾರವನ್ನು ತಂದು ಸೂಕ್ತಕ್ರಮವನ್ನು ಕೈಗೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಪತಿಯವರೇ, ಅವರು ಇಬ್ಬರು ಎಕ್ಸೈಸ್ ಡಿಪಾರ್ಟಮೆಂಟ್ ಅಧಿಕಾರಿಗಳನ್ನು ಕೂಡಲೇ ಅಮಾನತ್ತಿನಲ್ಲಿಡಬೇಕು, ಕ್ರಿಮಿನಲ್ ಕಕ್ಷೆಗೆ ಕೊಡಬೇಕು ಎನ್ನುವ ವಿಚಾರವನ್ನು ಏನು ಎತ್ತಿದ್ದಾರೆ, ಆ ವಿಚಾರವನ್ನು ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

ಊ) ಕೆ.ಆರ್. ಪೇಟೆ ನಗರಸಭೆಯ ಅಧ್ಯಕ್ಷರ ಚುನಾವಣೆಯನ್ನು ಬೇಗ ನಡೆಸುವುದರ ಕುರಿತು

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಸಭಾಧ್ಯಕ್ಷರೇ, ಕೆ.ಆರ್. ಪೇಟೆಯ ನಗರ ಪಂಚಾಯತಿ ಚುನಾವಣೆ ನಡೆದಿರತಕ್ಕಂಥಾದ್ದು 19.6.96ರಂದು ಅದರ ರಿಸಲ್ಟ್ ಅನೌನ್ಸ್ ಆಗಿರತಕ್ಕಂಥಾದ್ದು 20.6.96ರಂದು. ಅದರ ಪ್ರೆಸಿಡೆಂಟ್ ಎಲೆಕ್ಷನ್ ಎಂದು ಹೇಳಿ 19.7.96ರಕ್ಕೆ ಫಿಕ್ಸ್ ಆಗಿದ್ದನ್ನು ಮೂರು ಸಾರಿ ಮುಂದೂಡತಕ್ಕಂಥ ಒಂದು ಪ್ರಯತ್ನವಾಗಿದೆ. ಅದನ್ನು ಯಾವ ಕಾರಣಕ್ಕೋಸ್ಕರ ಮುಂದೂಡಿದ್ದಾರೆ ಎಂಬುದು ಯಾವುದರಲ್ಲೂ ಪ್ರಯತ್ನವಾಗಿದೆ. ಅದನ್ನು ಯಾವ ಕಾರಣಕ್ಕೋಸ್ಕರ ಮುಂದೂಡಿದ್ದಾರೆ ಎಂಬುದು ಯಾವುದರಲ್ಲೂ ಕಾಣುತ್ತಿಲ್ಲ. ಇಲ್ಲಿ ಸರ್ಕಾರದವರು ಹೊರಡಿಸಿರತಕ್ಕಂಥ ಆಜ್ಞೆ ಕೂಡ ಇದೆ. ವಿಧಾನಸೌಧದಿಂದ ಆಜ್ಞೆಯನ್ನು ಮಾಡಿ ಅದನ್ನು ಮುಂದೂಡತಕ್ಕಂಥ ಕೆಲಸವನ್ನು ಏಕೆ ಮಾಡಿದ್ದಾರೆ ಎಂದು ಅರ್ಥವಾಗುತ್ತಿಲ್ಲ. ಇದು ಯಾವುದೇ ಕಾರಣವನ್ನೂ ಕೂಡ ಕೊಡದೆ ಮುಂದೂಡಿರತಕ್ಕಂಥಾದ್ದು. ಇದಕ್ಕೆ ಒಂದು ಕಾರಣ ಎಂದರೆ, ಇವತ್ತು ಅವರ ಪಡಳಿತ ಪಕ್ಷಕ್ಕೆ ಸೇರಿದವರು ಅಧ್ಯಕ್ಷರಾಗಲಿಲ್ಲ ಎನ್ನುವಂಥ ಕಾರಣಕ್ಕೆ ಈ ಚುನಾವಣೆಯನ್ನು ಮುಂದೂಡಿದ್ದಾರೆ ಎನ್ನುವಂಥಾದ್ದು ನಮ್ಮ ಆರೋಪ ಇದೆ. ದಯಮಾಡಿ ಯಾವ ಕಾರಣಕ್ಕೋಸ್ಕರ ಮುಂದೂಡಿದ್ದಾರೆಂಬುದನ್ನು ತಿಳಿಸಬೇಕೆಂಬುದು